International Journal of Kannada Research
www.kannadajournal.com

ISSN: 2454–5813
IJKR 2018; 4(4): 01-06
© 2018 IJKR
www.kannadajournal.com
Received: 01-08-2018
Accepted: 02-09-2018

**ಅಮೃತಾ ರಶ್ಮಿ ಫೆರ್ನಾಂಡಿಸ್**
ಸಂಶೋಧನಾ ವಿದ್ಯಾರ್ಥಿನಿ, ಡಾ. ಹಾಮಾನಾ ಸಂಶೋಧನಾ ಕೇಂದ್ರ, ಉಜಿರೆ

**Correspondence**
**ಅಮೃತಾ ರಶ್ಮಿ ಫೆರ್ನಾಂಡಿಸ್**
ಸಂಶೋಧನಾ ವಿದ್ಯಾರ್ಥಿನಿ, ಡಾ. ಹಾಮಾನಾ ಸಂಶೋಧನಾ ಕೇಂದ್ರ, ಉಜಿರೆ

# ತುಳುನಾಡಿನ ಕಾದಂಬರಿಯಲ್ಲಿ ಅನಾವರಣಗೊಂಡ ಭೂಸುಧಾರಣೆಯ ಪರಿಣಾಮಗಳು

**ಅಮೃತಾ ರಶ್ಮಿ ಫೆರ್ನಾಂಡಿಸ್**

## ಪೀಠಿಕೆ

ರಾಜರ ಕಾಲದಿಂದಲೂ ತುಳುನಾಡಿನಲ್ಲಿ ಜಮೀನ್ದಾರಿ ಪದ್ಧತಿ ಜಾರಿಯಲ್ಲಿತ್ತು. ಬ್ರಿಟಿಷರ ಕಾಲದಲ್ಲಿ ಈ ವ್ಯವಸ್ಥೆ ಹೆಚ್ಚು ಬಲಿಷ್ಠವಾಗಿ ಮುಂದುವರಿದಿತ್ತು. ಒಂದು ಗ್ರಾಮದಲ್ಲಿ ಕನಿಷ್ಠ ಮೂರು ನಾಲ್ಕು ಮಂದಿಯಾದರೂ ಗೇಣಿಗೆ ಭೂಮಿ ನೀಡುವ ಶ್ರೀಮಂತರು ಇರುತ್ತಿದ್ದರು. ಇವರು ತಾವು ದುಡಿಯದೆ ಮೂಲದಾಳುಗಳಿಂದ ದುಡಿಸಿಕೊಳ್ಳುತ್ತಿದ್ದರು. ಮೂಲದಾಳುಗಳು ತಳಸಮುದಾಯದವರೇ ಆಗಿರುತ್ತಿದ್ದರು. ಇವರಿಗೆ ಭೂಮಿ ಇಲ್ಲದೆ ಪ್ರತಿಯೊಂದಕ್ಕೂ ಜಮೀನ್ದಾರನನ್ನು ನಂಬಿಕೊಂಡಿದ್ದರು. ಜಮೀನ್ದಾರರು ಹೆಚ್ಚಿನ ಭೂಮಿಯನ್ನು ಮೂಲಗೇಣಿಗೆ ಅಥವಾ ಚಾಲಗೇಣಿಗೆ ನೀಡುತ್ತಾ ಆದಾಯ ಹೆಚ್ಚಿಸಿಕೊಳ್ಳುತ್ತಿದ್ದರು.

## ಭೂಸುಧಾರಣೆ ಕಾನೂನಾಗಿ ಬಂದದ್ದು

ಆದಿಮಾನವನು ಭೂಮಿಯಲ್ಲಿ ಬೆಳೆದ ಹಣ್ಣುಹಂಪಲು, ಗೆಡ್ಡೆಗೆಣಸುಗಳ ಬಳಕೆಗೆ ತನ್ನ ಆಸೆಯನ್ನು ಸೀಮಿತಗೊಳಿಸಿದ್ದ. ಜನಸಂಖ್ಯೆ ವೃದ್ಧಿಸುತ್ತ ಬಂದಂತೆಲ್ಲ ಭೂಮಿಯ ಮೇಲೆ ಹಕ್ಕು ಸ್ಥಾಪನೆ ಆರಂಭವಾಯಿತು. ಬಲಿಷ್ಠನಾದವನು ರಾಜನಾದ. ನಿರ್ದಿಷ್ಟ ಭೂಭಾಗದ ಒಡೆಯನಾದ ರಾಜ ಕಂದಾಯ ವಸೂಲಿ ಮಾಡುವ ಕಾಯಕವನ್ನು ಗ್ರಾಮಪಂಚಾಯತಿಗಳಿಗೆ ನೀಡಿದ.

'ಪ್ರಾಚೀನ ಭಾರತದಲ್ಲಿ ಭೂ ಕಂದಾಯವನ್ನು ವಸೂಲು ಮಾಡುವುದು ಗ್ರಾಮ ಪಂಚಾಯತಿಯ ಜವಾಬ್ದಾರಿಯಾಗಿತ್ತು. ಆದರೆ ಮೊಘಲರ ಕಾಲದಲ್ಲಿ ಕಂದಾಯ ವಸೂಲಿ ಮಾಡುವುದು ಗ್ರಾಮ ಪಂಚಾಯತಿಗಳ ಬದಲಾಗಿ ವೈಯಕ್ತಿಕವಾಗಿ ವ್ಯಕ್ತಿಗಳಿಗೆ ಅಧಿಕಾರ ಕೊಡಮಾಡಲಾಯಿತು'.[1] ಬ್ರಿಟಿಷರ ಕಾಲದಲ್ಲಿ ಕಂದಾಯ ವಸೂಲಿ ಮಾಡುವ ಅಗತ್ಯ ಉಂಟಾಗಿ ಜಮೀನ್ದಾರರ ನೇಮಕವಾಯಿತು. ಬ್ರಿಟಿಷರಿಗೆ ಜಮೀನುಗಳ ಲೆಕ್ಕಪತ್ರಗಳನ್ನಿಡಲು ಮತ್ತು ಕಾಲದಿಂದ ಕಾಲಕ್ಕೆ ಕಂದಾಯ ವಸೂಲಿ ಮಾಡಲು ಪಟೇಲ, ಶಾನುಭೋಗ, ಉಗ್ರಾಣಿ ಮೊದಲಾದ ಅಧಿಕಾರಿಗಳಿರುತ್ತಿದ್ದರು. ಜಮೀನುದಾರರು ಭೂಮಿಯಲ್ಲಿ ತಾವೇ ವ್ಯವಸಾಯ ಮಾಡದೆ, ಅದನ್ನು ಬೇರೆ ಬೇರೆ ಒಪ್ಪಂದಗಳಿಗೆ ಅನುಗುಣವಾಗಿ ವ್ಯವಸಾಯ ಮಾಡುವವರಿಗೆ ನೀಡುತ್ತಿದ್ದರು. ಈ ರೀತಿ ಭೂಮಾಲೀಕರು ಹಾಗೂ ಗೇಣಿದಾರರು ಎಂಬ ಎರಡು ವರ್ಗಗಳು ರೂಪಿತವಾದವು. ಈ ಮಧ್ಯವರ್ತಿಗಳು ಭೂಮಾಲೀಕರಾದರು. ಸಾಮಾನ್ಯ ಜನತೆ ಗೇಣಿಗೆ ಭೂಮಿ ಪಡೆದು ದುಡಿಯುವುದು ಅನಿವಾರ್ಯವಾಯಿತು. ಸ್ವಾತಂತ್ರ್ಯ ಲಭ್ಯವಾದರೂ ಜಮೀನ್ದಾರಿ ಪದ್ಧತಿ ನಶಿಸಲಿಲ್ಲ. ಗೇಣಿದಾರ ಗೇಣಿಯನ್ನು ಭೂಮಾಲೀಕನಿಗೆ ಸಲ್ಲಿಸುತ್ತಾ ಜೀವನ ಸಾಗಿಸುತ್ತಿದ್ದುದು ಸಾಮಾನ್ಯವಾಗಿತ್ತು. ದೇಶದ ಅಭಿವೃದ್ಧಿಗಾಗಿ ಗೇಣಿದಾರನಿಗೆ ಭೂಮಿಯ ಮೇಲಿನ ಒಡೆತನ ನೀಡುವುದು ಅನಿವಾರ್ಯವಾಯಿತು. ಜಮೀನನ್ನು ಗೇಣಿಗೆ ಪಡೆದಿದ್ದ ಬಡ ಗೇಣಿದಾರ ಅದನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗದಷ್ಟು ಬಡವನಾಗಿದ್ದ. ಭೂಮಿ ತನ್ನದಲ್ಲವೆಂಬ ಸತ್ಯ ಅದನ್ನು ಅಭಿವೃದ್ಧಿಪಡಿಸಲು ಬಿಡುತ್ತಿರಲಿಲ್ಲ. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಕಮ್ಯೂನಿಸ್ಟರಿಂದ ಉಳುವವನಿಗೆ ಭೂಮಿ ನೀಡಬೇಕೆಂಬ ಹೋರಾಟ ಬಲವಾಯಿತು. ತನ್ನ ಹೆಸರಲ್ಲಿ ಭೂಮಿ ಇಲ್ಲದ ಕಾರಣ ರೈತ ಸಾಲ ಮಾಡಲು ಇಲ್ಲವೆ ಅಭಿವೃದ್ಧಿ ಪಡಿಸಲು ಹಿಂಜರಿಯುತ್ತಿದ್ದ. ಭೂಮಿ ಅಭಿವೃದ್ಧಿಪಡಿಸಲು ಸ್ವಂತ ಒಡೆತನವಿರಬೇಕೆಂಬ ಪ್ರಜ್ಞೆ ಆಳುವ ವರ್ಗವನ್ನು ಕಾಡಿತ್ತು. ಈ ನಿಟ್ಟಿನಲ್ಲಿ ಚಿಂತನೆ

ಆರಂಭವಾಯಿತು. ಇದರಿಂದ ಭೂಸುಧಾರಣಾ ಕಾನೂನು ಜಾರಿಗೆ ತರುವ ಅನಿವಾರ್ಯತೆ ಸರಕಾರಕ್ಕೆ ಉಂಟಾಯಿತು.

'ಇದನ್ನು ಸಾಧಿಸುವುದಕ್ಕಾಗಿ ಆಗಿನ ಮೈಸೂರು ಸರಕಾರವು 1957ರಲ್ಲಿ ಶ್ರೀ ಬಿ.ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ 'ಮೈಸೂರು ಗೇಣಿ ಮತ್ತು ಕೃಷಿ ಭೂಮಿ ಕಾಯ್ದೆ ಸಮಿತಿ' ಯನ್ನು ರಚಿಸಿತು. ರಾಜ್ಯದ ಭೂಹಿಡುವಳಿಗಳ ಬಗ್ಗೆ ಚರ್ಚಿಸುವಾಗ ಈ 'ಜತ್ತಿ ಸಮಿತಿಯ' ಪ್ರಸ್ತಾಪ ಪ್ರಮುಖವಾಯಿತು. 1957ರ ಮೇ ತಿಂಗಳಿನಲ್ಲಿ ಕಾರ್ಯಾರಂಭ ಮಾಡಿದ ಈ ಸಮಿತಿಯು ಅತ್ಯಂತ ಶೀಘ್ರವಾಗಿ ಅದೇ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ವರದಿಯನ್ನು ಸಲ್ಲಿಸಿತು. ಈ ವರದಿಯ ಆಧಾರದ ಮೇಲೆ 1961ರಲ್ಲಿ ಒಂದು ಮಸೂದೆಯನ್ನು ತಯಾರಿಸಿ ವಿಧಾನಮಂಡಲದ ಒಪ್ಪಿಗೆಯನ್ನು ಪಡೆಯಲಾಯಿತು. ಅನೇಕ ಅಡೆತಡೆಗಳನ್ನು ಎದುರಿಸಿ ಅಂತಿಮವಾಗಿ ಈ ಮಸೂದೆಯು 2.10.1965ರಂದು 'ಮೈಸೂರು ಭೂಸುಧಾರಣಾ ಕಾಯಿದೆ – 1961' ಎಂಬ ಹೆಸರಿನಲ್ಲಿ ಜಾರಿಗೆ ಬಂತು'.[2] ಈ ಕಾಯಿದೆ ಭೂಮಾಲೀಕರು ಗೇಣಿದಾರರನ್ನು ಬೇಕೆಂದಾಗ ಕಿತ್ತುಹಾಕುವುದನ್ನು ತಡೆಯುವಲ್ಲಿ ಸಫಲವಾಯಿತಾದರೂ ಉದ್ದೇಶಿತ ಗುರಿಯನ್ನು ಮುಟ್ಟಲಿಲ್ಲ. ಭೂಮಾಲೀಕನೂ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದುದರಿಂದ ಗೇಣಿದಾರನಿಗೆ ನ್ಯಾಯ ಸಿಗುವುದು ವಿಳಂಬವಾಯಿತು. ಕೇಂದ್ರ ಸರ್ಕಾರದ ಸೂಚನೆಯಂತೆ ಈ ಕಾಯ್ದೆಯನ್ನು ಸಮಗ್ರವಾಗಿ ಪರಿಶೀಲಿಸಿ 1974ರಲ್ಲಿ ಭೂಸುಧಾರಣಾ ಕಾಯಿದೆಯು ಆಗಿನ ಮುಖ್ಯಮಂತ್ರಿ ದೇವರಾಜು ಅರಸು ಅವರ ಕಾಲದಲ್ಲಿ ಜಾರಿಗೆ ಬಂದಿತು. ಕರ್ನಾಟಕ ಭೂಸುಧಾರಣಾ ಕಾಯ್ದೆಯು ನಮ್ಮ ಸಂವಿಧಾನದ 9ನೆಯ ಪರಿಶಿಷ್ಟದಲ್ಲಿ ಸೇರಿದೆ. ಉಳುವವನನ್ನೇ ಹೊಲದೊಡೆಯನನ್ನಾಗಿ ರೂಪಿಸಿದ ಈ ಕಾಯಿದೆ ಬಡಜನರ ಜೀವನದಲ್ಲಿ ಆಶಾಕಿರಣವಾಯಿತು. ಭೂಮಾಲೀಕರಲ್ಲಿ ಭಯ, ಆತಂಕ, ಕೋಪವನ್ನು ಹುಟ್ಟಿಸಿತು.

'ಉಳುವವನನ್ನೇ ಹೊಲದೊಡೆಯನನ್ನಾಗಿ ಮಾಡುವ ಈ ಪುರೋಗಾಮಿ ಶಾಸನದಿಂದ ಭೂಮಾಲೀಕತ್ವದ ವಿಸರ್ಜನೆ ಬಲು ಸುಲಭವಾಯಿತು. ಭೂಮಾಲೀಕತ್ವದಿಂದಾಗಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಮೇಲಂತಸ್ತಿನಲ್ಲಿ ಇರುವ ಭೂ ಒಡೆಯರಿಗೆಲ್ಲ ಈ ಪುರೋಗಾಮಿ ಶಾಸನವನ್ನು ಪ್ರತಿಗಾಮಿಯಾಗಿ ಪರಿವರ್ತಿಸುವ ಸಾಮರ್ಥ್ಯ ಇದೆ ಎಂದು ಯೋಚಿಸಿದ ಸರಕಾರ, ಈ ಭೂಸುಧಾರಣಾ ಶಾಸನವನ್ನು ಪರಿಣಾಮಕಾರಿಯಾಗಿ ಪ್ರಯೋಗಿಸುವಂತೆ ಭೂಪಂಚಾಯಿತ್ತಿಗಳೆಂಬ ಕಮ್ಯೂನಿಸ್ಟ್ ಕಲ್ಪನೆಯಾಗಿರುವ ಜನತಾ ನ್ಯಾಯಾಲಯಗಳನ್ನು ಆರಂಭಿಸಿತು'[3] ಹೀಗೆ ಭೂನ್ಯಾಯಮಂಡಳಿಗಳು ಅಸ್ತಿತ್ವಕ್ಕೆ ಬಂದವು.

'ಆದರೆ ಭೂಸುಧಾರಣೆಯೆಂದರೆ ಅದರ ನಿಜವಾದ ಅರ್ಥದಲ್ಲಿ ಈ ಮೇಲಿನ ಗುರಿಯನ್ನು ಕಾಯಿದೆಗಳ ಮೂಲಕ ತಲುಪುವುದಷ್ಟಕ್ಕೆ ಸೀಮಿತವಾಗುವುದಿಲ್ಲ. ಅವುಗಳೊಂದಿಗೆ ಕೃಷಿ ಜಮೀನುಗಳನ್ನು ಅಭಿವೃದ್ಧಿಪಡಿಸಿ, ಅವುಗಳಿಂದ ಪರಮಾವಧಿ ಬೆಳೆಯನ್ನು ತೆಗೆಯುವುದು 'ಭೂಸುಧಾರಣೆ' ಎನ್ನಿಸಿಕೊಳ್ಳುತ್ತದೆ. ಹಾಗೆ ಭೂಮಿಯ ಗುಣಮಟ್ಟವನ್ನು ಹೆಚ್ಚಿಸಬೇಕಾದರೆ ಭೂಮಿಯ ಕೃಷಿಕನಿಗೆ ಅದರ ಒಡೆತನವನ್ನು ನೀಡುವುದು, ಜಮೀನ್ದಾರರಲ್ಲಿ ನಿರ್ದಿಷ್ಟ ಮಿತಿಗಿಂತ ಹೆಚ್ಚಿರುವ ಭೂಮಿಯನ್ನು ವಶಪಡಿಸಿಕೊಂಡು ಭೂರಹಿತರಿಗೆ ವಿತರಿಸುವುದು ಮುಂತಾದವುಗಳು ಮೂಲಭೂತ ಅವಶ್ಯಕತೆಗಳಾಗಿರುತ್ತವೆ. ಆದ್ದರಿಂದ ಕೇವಲ ಮಾಲೀಕತ್ವ ನೀಡುವುದು, ಮಿತಿಯನ್ನು ಹೇರುವುದು ಅಂತಿಮ ಗುರಿಯಾಗುವುದಿಲ್ಲ. ಅವುಗಳು ಅಂತಿಮ ಗುರಿಯಾದ 'ಭೂಮಿಯ ಸುಧಾರಣೆ'ಯನ್ನು ಮಾಡಲು ಕೇವಲ ಮಾರ್ಗಗಳಾಗಿವೆ. ಭೂಸುಧಾರಣೆಯಲ್ಲಿ ಮುಖ್ಯವಾಗಿ ವೈಜ್ಞಾನಿಕ ವ್ಯವಸಾಯ ಪದ್ಧತಿ, ಕೃಷಿ ಅಭಿವೃದ್ಧಿ ಬ್ಯಾಂಕುಗಳ ಸ್ಥಾಪನೆ, ಕೃಷಿ ಮಾರುಕಟ್ಟೆಗಳ ಅಭಿವೃದ್ಧಿ, ಕೃಷಿ ಜಮೀನುಗಳಿಗೆ ಸರ್ವಋತು ರಸ್ತೆಗಳ ನಿರ್ಮಾಣ ಮುಂತದುವುಗಳೂ ಸಹ ಭೂಸುಧರಣಾ ಕಾನೂನುಗಳಷ್ಟೇ ಮಹತ್ವದ ಅಂಶಗಳಾಗುತ್ತವೆ.'[4] ಹೀಗೆ ಭೂಸುಧಾರಣೆ ಕಾನೂನು ಸರ್ವತೋಮುಖ ಪ್ರಗತಿಯನ್ನು ಸಾಧಿಸುವ ಉದ್ದೇಶವನ್ನು ಹೊಂದಿದೆ.

ಭೂಸುಧಾರಣೆಯ ಪರಿಣಾಮಗಳನ್ನು ನಾ. ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಯ ಅಧ್ಯಯನಕ್ಕೆ ಸೀಮಿತಗೊಳಿಸಲಾಗಿದೆ. ಭೂಸುಧಾರಣೆಯು ತುಳುನಾಡಿನಲ್ಲಿ ಹಲವು ಪಲ್ಲಟಗಳಿಗೆ ದಾರಿಯಾಯಿತು. ತುಳುನಾಡಿನ ಸಂಸ್ಕೃತಿಯ ಸ್ಥಿತ್ಯಂತರಕ್ಕೆ ಇದು ಮೂಲಕಾರಣವಾಯಿತು.

### ಗುತ್ತಿನ ಮನೆಯ ಮೇಲಾದ ಪರಿಣಾಮಗಳು

ನಾ. ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಯು ಮಾತೃಪ್ರಧಾನ ವ್ಯವಸ್ಥೆಯ ಏಳುಬೀಳುಗಳನ್ನು ಹಾಗೂ ಗುತ್ತು ಮನೆಯ ಸ್ಥಾನಮಾನದ ಇಳಿತವನ್ನು ಸೂಕ್ಷ್ಮವಾಗಿ ಚಿತ್ರಿಸಿದೆ. ಅಧಿಕಾರ ಕೇಂದ್ರವಾದ ಗುತ್ತುಮನೆ ಸಾಮಾನ್ಯವಾಗುವುದನ್ನು ಸ್ಪಷ್ಟವಾಗಿ ಚಿತ್ರಿಸಿದೆ. ಭೂಮಸೂದೆ ಜಾರಿಯಾದ ಫಲವಾಗಿ ತಿಳುವಳಿಕೆ ಪಡೆದು ಗುತ್ತಿನ ಒಕ್ಕಲುಗಳು ಸ್ವತಂತ್ರರಾಗುತ್ತಾ ಸಾಗುತ್ತಾರೆ. ಸಂಕಪ್ಪಯ್ಯನವರ ಉದಾರವಾದೀ ನಡವಳಿಕೆ ಮೂಲದಾಳುಗಳು ಹಾಗೂ ಗೇಣಿದಾರರು ಸ್ವತಂತ್ರರಾಗಲು ಸೂಕ್ತ ಸಂದರ್ಭವನ್ನು ಹುಟ್ಟುಹಾಕುತ್ತದೆ. ಪ್ರತಿರೋಧವಿಲ್ಲದೆ ಅವರು ಸ್ವತಂತ್ರರಾಗುತ್ತಾರೆ. ಮೊದಲಿನಂತೆ ಬಿಟ್ಟಿ ಚಾಕರಿ ಮಾಡಲು ಅವರು ಸಿದ್ಧರಿಲ್ಲ. ಪ್ರತಿ ಪಲ್ಲಟವೂ ಹೊಸ ಸಮಸ್ಯೆಯನ್ನು ಹುಟ್ಟುಹಾಕುತ್ತಿರುತ್ತದೆ. ಅದನ್ನು ಎದುರಿಸುವ ಸಂದರ್ಭದಲ್ಲಿ ಹೊಸ ಆಲೋಚನೆಗಳು, ಹೊಸ ಉಪಾಯಗಳು ಅನಿವಾರ್ಯವಾಗುತ್ತವೆ.

ಭೂಮಸೂದೆಯ ಕಾನೂನಿನ್ವಯ ಗೇಣಿದಾರರು ಸರಕಾರಕ್ಕೆ ಅರ್ಜಿ ಸಲ್ಲಿಸಲು ಹೊರಟಾಗ 'ಅದು ಸಾಧ್ಯವಿಲ್ಲ! ನೀವು ಭೂಮಿಯ ಮೌಲ್ಯ ನೀಡಿ ಸ್ವತಂತ್ರವಾಗಿ. ಇಲ್ಲವೇ ಅರ್ಧಾಂಶದಷ್ಟು ಭೂಮಿಯನ್ನು ಗುತ್ತಿನ ಮನೆಗೆ ಕೊಟ್ಟುಬಿಡಿ'[5]ಎಂದು ಗುತ್ತಿನ ಯಜಮಾನಿ ಅಂಬಕ್ಕೆ ಆಗ್ರಹಿಸಿದ್ದರು. ಆದರೆ ಸಂಕಪ್ಪಣ್ಣ ಗೇಣಿದಾರರ ಪರವಾಗಿ ನಿಂತಾಗ ಕೊಂದು ಬಿಡುವಷ್ಟು ಕೋಪ ಬಂದರೂ ಅಣ್ಣನಿಗೆ ಏನೂ ಮಾಡಲಾಗದೆ ಮಧ್ಯಾಹ್ನ ಊಟ ಮಾಡದೆ ಉಪವಾಸ ಮಲಗಿದ್ದರು. ಎಲ್ಲಾ ಆಳುಗಳಿಗೂ ಗುತ್ತಿನ ಮನೆಯಲ್ಲೇ ಭೋಜನದ ವ್ಯವಸ್ಥೆಯಾದಾಗ ಅಂಬಕ್ಕೆ ಇದನ್ನು ನೋಡಲಾರೆ ಎಂಬಂತೆ ತಲೆನೋವು ಎಂದು ಮಲಗಿದಳು.

ಗದ್ದೆ ಉಳುಮೆ ಮಾಡಲು ಆಳುಗಳು, ಕೋಣಗಳೂ ಇಲ್ಲದಾಗ ಸಂಕಪ್ಪ ಹೆಗ್ಗಡೆ ನಿರಾಶೆಯಿಂದ ಬಂದಾಗ, ಅಂಬಕ್ಕೆ ಸಮಾಧಾನಿಸುವ ಮಾತುಗಳು ಬಂಟರ ಸಮುದಾಯದ ಧೈರ್ಯವನ್ನು ಸೂಚಿಸುತ್ತವೆ. 'ಗುತ್ತಿನಲ್ಲಿ ಹುಟ್ಟಿ ಇಷ್ಟಕ್ಕೆಲ್ಲ ನಾಚಿಕೆ ಇಲ್ಲವೇ ಭಯಪಡುವುದೇಕೆ ಸಂಕಪ್ಪಣ್ಣ ? ಬಂಟ ಯಾವತ್ತೂ ಸೋಲುವುದು ಅಂತ ಇಲ್ಲ. ಒಕ್ಕಲುತನ ಕೈಬಿಟ್ಟರೆ ಏನಾಯ್ತು? ಇನ್ನೊಂದು ಉದ್ಯೋಗ ಹಿಡಿದರಾಯಿತು. ಎಂಥ ಕಾನೂನೇ ಬರಲಿ, ಯಾರೇ ನಮ್ಮ 'ಚಂದ' ನೋಡಲು ಪ್ರಯತ್ನಿಸಲಿ, ಅದಕ್ಕೆಲ್ಲ ನಾವು ಜಗ್ಗುವುದರಲ್ಲಿ ಅರ್ಥ ಇಲ್ಲ'[6] ಎಲ್ಲವನ್ನೂ ಜುಮಾದಿಗೆ ಒಪ್ಪಿಸಿ ನಿರುಮ್ಮಳವಾಗುವ ಕಲೆಯೂ ಆಕೆಗೆ ತಿಳಿದಿದೆ. ಕೆಲವೊಂದು ಸಂದರ್ಭದಲ್ಲಿ ಕೃಷಿಗೆ ಕೂಲಿಯಾಳುಗಳು ದೊರಕದ ಸಂದರ್ಭದಲ್ಲಿ ಅಸಹನೆ, ಕ್ರೋಧ ಉದ್ಭವವಾಗಿ

ವ್ಯಂಗ್ಯದ ಮಾತುಗಳೂ ಹೊರಬರಲು ಕಾಯುತ್ತಿದ್ದವು. ಜೊತೆಗೆ ಒಕ್ಕಲಿನವರು ತಮಗೆ ಸರಿಸಮಾನರಾಗುವುದು ಎಂದಿಗೂ ಸಾಧ್ಯವಿಲ್ಲ ಎಂಬ ಪ್ರಜ್ಞೆಯೂ ಆಕೆಯನ್ನು ಕಾಡುತ್ತಿತ್ತು. ಮೂಲದಾಳುಗಳು ಮಾತ್ರ ಕೃಷಿ ಕೆಲಸಕ್ಕೆ ಬರುತ್ತಿದ್ದರೂ, ಬೂದೆ ಕ್ಯಾನ್ಸರ್‌ನಿಂದ ಹಾಗೂ ತೌಡ ಸತ್ತಾಗ ಅಂಬಕ್ಕೆ ಕೃಷಿಮಾಡುವ ಬಗೆ ಹೇಗೆ? ಎಂಬ ಆತಂಕದಿಂದ ತೊಳಲಾಡುತ್ತಾಳೆ.

ಸಾಂತೇರ್‌ಗುತ್ತಿನ ಗೇಣಿದಾರರ ಬೆಟ್ಟುಗದ್ದೆಗಳು ಕೆಂಪುಕಲ್ಲಿನ ಕೋರೆಗಳಾಗಿ ಪರಿವರ್ತನೆಯಾಗುವುದು ಅಂಬಕ್ಕೆಗೆ ಆಘಾತವನ್ನುಂಟು ಮಾಡುತ್ತವೆ. ಕೃಷಿಗೆ ಕೂಲಿಕಾರ್ಮಿಕರು ಲಭ್ಯವಾಗದೆ ಕಂಗಿನ ತೋಟ ಮಾಡುವ ನಿರ್ಧಾರಕ್ಕೆ ಸಂಕಪ್ಪಣ್ಣ ಬಂದಾಗ ಅಂಬಕ್ಕೆ ವಿರೋಧಿಸುತ್ತಾಳೆ. 'ನೂರಾರು ಮುಡಿ ಅಕ್ಕಿ 'ಮುಟ್ಟುತ್ತಿದ್ದ (ಹೇರುತ್ತಿದ್ದ) ಗುತ್ತಿನ 'ಕುತ್ತಟ್ಟ'ದಲ್ಲಿ ಹತ್ತು ಮುಡಿ ಅಕ್ಕಿಯೂ ಇಲ್ಲ ಅಂತ ಆದರೆ ಅದು ಗುತ್ತಿನ ಮನೆ ಅಂತ ಹೇಗೆ ಆಗುವುದಣ್ಣ?'[7] ಗೇಣಿದಾರರಿಗೆ ಭೂಮಿ ಸ್ವಂತದ್ದಾದಾಗ ಆ ಮರಗಳನ್ನು ಅಗತ್ಯಕ್ಕಾಗಿ ಕಡಿದು ಮಾರುತ್ತಾರೆ. ಕರಿಯ ಪೂಜಾರಿಗೆ ಸಿಕ್ಕಿದ ಭಾಗದ ಗಡಿ ಉಪ್ಪಿನಕಾಯಿ ಮರ ಕಡಿದಾಗ ಅಂಬಕ್ಕೆ ತುಂಬಾ ನಲುಗುತ್ತಾಳೆ. ಎರಡು ದಿನ ಅದೇ ಮಾತನ್ನು ಆಡುತ್ತಾ ಸಂಕಪ್ಪನಲ್ಲಿ ಬೈಸಿಕೊಳ್ಳುತ್ತಾಳೆ. 'ನನಗೆ ನನ್ನನ್ನು ಕಡಿದಷ್ಟೇ ನೋವು ಆಯ್ತು' [8] ಎಂದು ಅಂಬಕ್ಕೆ ಅತ್ತಿದ್ದು ಆಕೆಗೆ ಗುತ್ತಿನ ಜಮೀನಿನ ಮೇಲಿರುವ ಪ್ರೀತಿಯನ್ನು ಸೂಚಿಸುತ್ತದೆ.

ವರ್ಷಂಪ್ರತಿ ತಪ್ಪದೆ ನಡೆದು ಬಂದ ಕೃಷಿಕಾರ್ಯಗಳು ಕಷ್ಟದಲ್ಲಿ ಸಾಗುವಾಗ, ಗುತ್ತಿನ ಮನೆಯವರೇ ಪಡಿಮಂಚಕ್ಕೆ ಪೈರು ಬಡಿದಾಗ ಕೂಲಿಯಾಳುಗಳು ಧಾವಿಸಿ ಕೆಲಸವನ್ನು ಮುಂದುವರಿಸಿದರೂ, ಅಂಬಕ್ಕೆಗೆ ಕೊನೆಯ 'ಪೊಲಿ' ಹೇಳುವಾಗ ದುಃಖ ಒತ್ತರಿಸಿ ಬರುತ್ತದೆ. 'ಗುತ್ತಿನ ವೈಭವದ ದಿನಗಳು ಇಂದಿಗೆ ಮುಗಿದೇ ಹೋಯಿತು ನೋಡು!'[9] ಎಂದು ಅಂಬಕ್ಕೆ ಸಂಕಪ್ಪಣ್ಣನಲ್ಲಿ ಹೇಳುವ ಮಾತುಗಳು ಹಲವು ಅರ್ಥಗಳನ್ನು ಧ್ವನಿಸುತ್ತವೆ. ಭತ್ತದ ಕೃಷಿ, ಅದರೊಟ್ಟಿಗಿನ ಆಚರಣೆ, ಸಂಪ್ರದಾಯಗಳು, ಕೃಷಿ ಸಲಕರಣೆಗಳು, ಕೃಷಿಕಾರ್ಯಗಳು ಎಲ್ಲವೂ ಪಳೆಯುಳಿಕೆಗಳಾಗಿ ಬಿಡುವ ಸೂಚನೆಯನ್ನು ನೀಡುತ್ತದೆ. ಅಂಬಕ್ಕೆ ಮತ್ತೆ ಮತ್ತೆ ಘಾಸಿಗೊಳ್ಳುವ, ನೋವುಂಡ, ಬಾಲ್ಯದ ದಿನಗಳಿಗೆ ತದ್ವಿರುದ್ಧವಾದ ಸಂದರ್ಭಗಳಿಗೆ ಎದುರಾಗುವ ಸನ್ನಿವೇಶಗಳು ಘಟಿಸುತ್ತವೆ. ಕಂಗಿನ ತೋಟದ ಯೋಜನೆ ಮನದಲ್ಲಿ ಮೂಡಿದ್ದರೂ ಸಂಕಪ್ಪಣ್ಣ ಅಂಬಕ್ಕೆಗಾಗಿ ಕಷ್ಟದಿಂದ ಕೃಷಿಕಾರ್ಯ ಮುಂದುವರೆಸಿಕೊಂಡು ಬರುತ್ತಿದ್ದರು. ಆದರೆ ಆರ್ಥಿಕವಾಗಿ ಕುಸಿತ ಕಂಡಾಗ, ಕೃಷಿಗೆ ಕಾರ್ಮಿಕರು ಲಭ್ಯವಾಗದೆ ನಡೆಸಿಕೊಂಡು ಹೋಗಲು ದುಸ್ತರವೆನಿಸಿದಾಗ ಕಂಗಿನ ತೋಟ ಮಾಡಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ವಿಧಿಯಿಲ್ಲದೆ ಅಂಬಕ್ಕೆ ಹೊಂದಿಕೊಳ್ಳುತ್ತಾಳೆ. ಆಕೆಗೆ ಸಂಕಪ್ಪಣ್ಣ ಗದ್ದೆಯಲ್ಲಿ ಕೆಲಸ ಮಾಡುವ ಪರಿಸ್ಥಿತಿ ಬೇಕಿರಲಿಲ್ಲ. ಹೊಸತೋಟ ಎಂಬ ಹೆಸರಿನಲ್ಲಿ ತೋಟ ಉದಯಿಸುತ್ತದೆ. ಅಂಬಕ್ಕೆ ತನ್ನ ಕೊನೆಗಾಲದಲ್ಲಿ ಗುತ್ತು ಮನೆಯಲ್ಲಿ ಒಂಟಿಯಾಗಿ ಮೂಲದಾಳುಗಳಾದ ಕರ್ಗಿ, ಕೊರಗರ ಸಹಾಯದೊಂದಿಗೆ ಇದ್ದರೂ ಆಕೆಯ ವ್ಯಕ್ತಿತ್ವದಲ್ಲಿ ದೃಢತೆಯನ್ನು ಕಾಣಬಹುದು. ಆಕೆ ಪರಿಸ್ಥಿತಿಯನ್ನು ಎದುರಿಸುವಲ್ಲಿ ಆಕೆ ಗುತ್ತಿನ ನಿಜವಾದ ಯಜಮಾನಿ ಎಂಬುದು ಸಾಬೀತಾಗುತ್ತದೆ.

ಸಾಂತೇರ್ ಗುತ್ತಿನ ಮೂರನೇ ತಲೆಮಾರಿನವರಾದ ಅಂಬಕ್ಕ ಹಾಗೂ ಸಂಕಪ್ಪ ಹೆಗ್ಡೆಯವರಲ್ಲಿ, ಎರಡನೆಯವರು ಗಾಂಧಿವಾದಿ. ಗಾಂಧಿತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡವರು. ಆದ್ದರಿಂದ ಹೆಚ್ಚಿನ ಘರ್ಷಣೆಗೆ ಕಾರಣವಾಗದೆ ಮೂಲದಾಳುಗಳು ಸ್ವತಂತ್ರರಾಗುತ್ತಾರೆ. ಅಂಬಕ್ಕನ ವಿರೋಧಗಳಿಗೂ ಸಂಕಪ್ಪ ಹೆಗ್ಡೆ ಸೂಕ್ತ ಉತ್ತರವನ್ನು ನೀಡುತ್ತಾ ಬದಲಾದ ಸನ್ನಿವೇಶ, ಧೋರಣೆಗಳನ್ನು ಎದುರಿಸುತ್ತಾರೆ. ಕೂಲಿಗೆ ಸರಿಯಾದ ಮಜೂರಿ ನೀಡುವ ಅಭ್ಯಾಸ ಮಾಡುತ್ತಾರೆ. ಹೆಚ್ಚುವರಿ ದುಡಿಮೆಗೆ ಎರಡರಷ್ಟು ವೇತನ ನೀಡಲು ಅನುವಾಗುತ್ತಾರೆ. ಬದಲಾದ ಸಂದರ್ಭದಲ್ಲಿ ಶೀಘ್ರವಾಗಿ ಸ್ಪಂದಿಸಿ, ಮಾರ್ಪಾಡು ಮಾಡುವವರು ಬದುಕಿಕೊಳ್ಳುತ್ತಾರೆ. ಪ್ರತಿ ಕ್ಷಣವೂ ಹೊಸ ಸವಾಲುಗಳು, ಹೊಸ ಸಾಧ್ಯತೆಗಳು, ಆಲೋಚನೆ, ವಿಚಾರಗಳೂ ಪ್ರತಿ ಕ್ಷಣವೂ ಒಡೆದು ಕಟ್ಟುವ ನಿರಂತರವಾದ ಪ್ರಕ್ರಿಯೆಯನ್ನು ಗಮನಿಸಬಹುದು.

ಬೀಡಿ, ಕಲ್ಲುಕೋರೆ ಮುಂತಾದ ಹಲವು ವೃತ್ತಿಗಳು ಜನಪ್ರಿಯವಾಗುತ್ತಿದ್ದಂತೆ ಕೃಷಿಗೆ ಕಾರ್ಮಿಕ ಸಂಖ್ಯೆಯು ಗಣನೀಯ ಇಳಿಮುಖ ಕಂಡಿತು. ಬಾಕಿಮಾರು ಗದ್ದೆ ಉಳಲು ಗುತ್ತಿನ ನಾಲ್ಕು ಜೊತೆ ಕೋಣಗಳು ಬಿಟ್ಟರೆ ಬೇರೆ ಕೋಣಗಳ ಸುಳಿವಿಲ್ಲ. ಕೃಷಿ ಮಾಡುವುದಾದರೂ ಹೇಗೆ? ಎಂಬ ಹೊಸ ಸಮಸ್ಯೆ ಹುಟ್ಟಿಕೊಂಡಿತು. ಅಂಬಕ್ಕೆ ಚಿಂತಿತರಾದಾಗ ಸಂಕಪ್ಪ ಹೆಗ್ಡೆ ಟಿಲ್ಲರ್ ತಂದು ಉಳುಮೆ ಮಾಡುವುದರ ಕುರಿತು ತೀರ್ಮಾನಿಸುತ್ತಾರೆ. ಹಾಗೇ ಉಳುಮೆಯೂ ಯಾವುದೇ ಆತಂಕವಿಲ್ಲದೆ ನೆರವೇರುತ್ತದೆ. ಮಾನವಶ್ರಮಕ್ಕೆ ಪರ್ಯಾಯವಾಗಿ ಆಧುನಿಕ ವಿಜ್ಞಾನದ ಕೂಸಾದ ಯಂತ್ರ ಪ್ರವೇಶಿಸುತ್ತದೆ. ಭಾವನೆಗಳ ಘರ್ಷಣೆಯಿಲ್ಲದೆ ಯಂತ್ರ ಕೆಲಸ ಮಾಡಿ ಮುಗಿಸುತ್ತದೆ.

ಉಳುವ ಸಮಸ್ಯೆ ಈ ವರುಷದ್ದು ಮಾತ್ರವಲ್ಲ, ಮುಂದಿನ ವರುಷಗಳದ್ದೂ ಕೂಡ. ಸನ್ನಿವೇಶ, ಸಂದರ್ಭಗಳ ಒತ್ತಡದಿಂದ ಕಂಗು ನೆಡುವ ತೀರ್ಮಾನವಾಗುತ್ತದೆ. ಆಹಾರ ಬೆಳೆಗಳಿಂದ ವಾಣಿಜ್ಯ ಬೆಳೆ ಬೆಳೆಯುವಲ್ಲಿ ಸ್ಥಿತ್ಯಂತರವಾಗುತ್ತದೆ. ಮನುಷ್ಯನ ಇಚ್ಚೆಗೆ ಮೀರಿ, ಅಳಿವು ಉಳಿವಿನ ಪ್ರಶ್ನೆ ಬಂದಾಗ ಬದಲಾವಣೆಗಳನ್ನು ಅಪ್ಪಿಕೊಳ್ಳಬೇಕಾಗುತ್ತದೆ. ಭೂಸುಧಾರಣಾ ಕಾನೂನು ಒಕ್ಕಲುಗಳಿಗೆ ಧಣಿಯಿಂದ ಭೂಮಿ ಒದಗಿಸುವವರೆಗೆ ಸೀಮಿತವಾಗುವುದಿಲ್ಲ; ಅದರ ಪರಿಣಾಮಗಳನ್ನು ಧಣಿ ಹಾಗೂ ಒಕ್ಕಲು ಮಕ್ಕಳು ಇಬ್ಬರೂ ಅರಗಿಸಿಕೊಳ್ಳಬೇಕಾಗುತ್ತದೆ. ಅರಿತೋ ಅರಿಯದೆಯೋ ನಡೆಯುವ ಇಂತಹ ಬದಲಾವಣೆಗಳು ಒಂದು ಸಮುದಾಯದ ಜೀವನಕ್ರಮವನ್ನೇ ಬೆರಗುಗೊಳಿಸುವಷ್ಟರಮಟ್ಟಕ್ಕೆ ಪರಿವರ್ತಿಸಿ ಬಿಡುತ್ತದೆ.

ಆರ್ಥಿಕವಾಗಿ, ರಾಜಕೀಯವಾಗಿ ಪ್ರಾಬಲ್ಯ ಮೆರೆದ ಗುತ್ತು ಸ್ವಾತಂತ್ರ್ಯನಂತರ ದುರ್ಬಲಗೊಂಡವು. ಇಲ್ಲವೆ ಇತರೆ ಉದ್ಯಮಗಳಿಂದ ಶ್ರೀಮಂತಿಕೆ ಉಳಿಸಿಕೊಂಡವು. ಗುತ್ತಿನ ಗೇಣಿದಾರರು ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವುದು, ತಂತ್ರಗಳನ್ನು ಹೆಣೆಯುವುದು ಹೊಸ ಅಧಿಕಾರದ ಆರಂಭದ ಸಂಕೇತ.

ಭೂಮಸೂದೆಯಿಂದ ಆದ ಪ್ರಮುಖ ಬದಲಾವಣೆ ಎಂದರೆ ಧಣಿಯೂ ದುಡಿಯುವಂತದುದು. ದುಡಿದರೆ ಮಾತ್ರ ದಿನ ಕಳೆಯುವಂತಹ ಪರಿಸ್ಥಿತಿ ನಿರ್ಮಾಣವಾಯ್ತು.

**ಕೃಷಿಯ ಮೇಲಾದ ಪರಿಣಾಮಗಳು**

'ಉಲ್ಲಂಘನೆ' ಕಾದಂಬರಿಯು ಭೂಮಸೂದೆಯ ನಂತರದ ಕೃಷಿ ಪಲ್ಲಟಗಳನ್ನು ಸಂದರ್ಭೋಚಿತವಾಗಿ ಚಿತ್ರಿಸಿದೆ.

ಭೂಮಸೂದೆಯಿಂದ ದಿಢೀರನೆ ಭೂಮಾಲಕತ್ವ ಪಡೆದ ಗೇಣಿದಾರರಿಗೆ 'ಮಂಗನ ಕೈಗೆ ಮಾಣಿಕ್ಯ' ಲಭಿಸಿದಂತಾಯಿತು. ಭೂಮಿಯನ್ನು ವಶಪಡಿಸಿಕೊಳ್ಳಲು ಹಲವು ಆಮಿಷಗಳು ಎದುರಾದವು. ದೊಡ್ಡ ದೊಡ್ಡ ಕಂಪನಿಗಳು ಹಣದ ಆಮಿಷವೊಡ್ಡಿ ಭೂಮಿ ಖರೀದಿಸಲು ಮುಂದಾದವು. ಪ್ರಕೃತಿ ನಾಶವೂ

ಅವ್ಯಾಹತವಾಗಿ ಸಾಗಿತು. ಎಷ್ಟೋ ವರುಷಗಳಿಂದ ಹುಲುಸಾಗಿ, ಬೃಹದಾಕಾರವಾಗಿ ಬೆಳೆದ ಮರಗಳು ನೆಲಕ್ಕುರುಳಿದವು. ಕಾಡು ನಾಶವಾಯಿತು. ಭೂಮಸೂದೆ ಹಲವು ಸ್ಥಿತ್ಯಂತರಗಳಿಗೆ ಕಾರಣೀಭೂತವಾಯಿತು. ಆಗ ತಾನೇ ಹುಟ್ಟಿದ ಹೊಸ ಉದ್ಯಮಗಳು ಇದರ ಜೊತೆ ಸೇರಿದವು. ಮರದ ವ್ಯಾಪಾರದಿಂದ ಹಲವು ಮರಗಳು ನಾಶವಾದವು. ಹೆಂಗಳೆಯರಿಗೆ ಬೀಡಿ ಆಕರ್ಷಕವೆನಿಸಿತು. ದಿಢೀರನೆ ಆಸ್ತಿಯ ಹಕ್ಕುದಾರರಾದ ಗೇಣಿದಾರರು ಹೆಚ್ಚಿನ ಆಮಿಷಗಳಿಗೆ ಬಲಿಯಾಗಿ ಅದನ್ನು ಮಾರಿಕೊಂಡರು.

ಭೂಮಸೂದೆ ಗೇಣಿದಾರರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿತು. ಹಿಂದೆಲ್ಲಾ ತಾವು ಬೆವರು ಸುರಿಸಿ ದುಡಿದ ಜಮೀನಿನಲ್ಲಿ ಬೆಳೆದದ್ದನ್ನೂ ಮಾಲೀಕನಿಗೆ ಕೊಡಬೇಕಾಗಿತ್ತು. ಈಗ ಸ್ವವಿಶ್ವಾಸ ಬೆಳೆದು, ನಿರ್ಧಾರಗಳನ್ನು ತೆಗೆದುಕೊಳ್ಳುವ ಜಾಣ್ಮೆ, ತರ್ಕ ಮಾಡುವ ಸಾಮರ್ಥ್ಯ ಎಲ್ಲವನ್ನೂ ಕಲಿತರು. ಗುಲಾಮರಂತೆ ಆಜ್ಞೆ ಪಾಲಿಸುವುದರಿಂದ ಚಿಂತನಾ ಶಕ್ತಿಯೇ ಕ್ಷಯಿಸಿಬಿಡುತ್ತದೆ. ಭೂಮಸೂದೆ ತರ್ಕಿಸುವ, ಚಿಂತಿಸುವ ಹಕ್ಕು ಸಾಧಿಸುವ ಸಾಮರ್ಥ್ಯ ನೀಡಿತು. ಗುತ್ತಿನಾರ್‌ನ ಆಜ್ಞೆಗಾಗಿ ಕಾಯುವವರಿಗೆ ಈಗ ಅದರ ಅವಶ್ಯಕತೆ ಇಲ್ಲ.

ಭತ್ತದ ಕೃಷಿ ಮಾಡುವುದು ದುಸ್ತರವೆನಿಸಿದಾಗ ಗುತ್ತಿನ ಮನೆಯಲ್ಲಿ ಕಂಗಿನ ತೋಟ ಮೇಲೇಳುತ್ತದೆ. ಕಂಗಿನ ತೋಟಕ್ಕೆ ದನಕರುಗಳ ಅಗತ್ಯ ಅಷ್ಟಾಗಿಲ್ಲ. ಕಾರ್ಮಿಕರ ಅವಶ್ಯಕತೆಯೂ ಕಡಿಮೆ. ಬಾಕಿಮಾರು ಗದ್ದೆ ಹೊಸತೋಟವೆಂದು ನಾಮಾಂಕಿತವಾಯಿತು.

ಅವಿಭಕ್ತ ಕುಟುಂಬಗಳು ಒಡೆದು ವಿಘಟನೆ ಆಗಿರುವುದು ಭೂಮಸೂದೆಯ ಮತ್ತೊಂದು ಪರಿಣಾಮ. ಕೂಡುಕುಟುಂಬವಿದ್ದಾಗ ಕೃಷಿಗೆ ಪರಸ್ಪರ ಸಹಕಾರವಿತ್ತು. ಮನೆ ನಿಭಾಯಿಸುವುದು ಸುಲಭವಿತ್ತು. ವಿಘಟಿತ ಕುಟುಂಬದ ದೆಸೆಯಿಂದ ಕೃಷಿಸಾಲ ಮಾಡಬೇಕಾಯಿತು. ಸಾಲ ತೀರಿಸಲಾಗದೆ ಜಮೀನು ಮಾರುವ ದುಸ್ಥಿತಿ ಒದಗಿತು. ಶಾಂತಕ್ಕೆ ಗುತ್ತಿನ ಯಜಮಾನಿ ಆಗಿರುವಾಗ ತುಂಬಿದ ಮನೆಯು ಅಂಬಕ್ಕೆಯ ಕಾಲಕ್ಕೆ ಆಕೆ ಏಕಾಂಗಿಯಾಗಿಬಿಟ್ಟದ್ದು ಹಲವು ಒಳನೋಟಗಳನ್ನು ನಮ್ಮೆದುರು ತೆರೆದಿಡುತ್ತದೆ. ಕೃಷಿ ಅವಲಂಬಿತರಾಗಿದ್ದಾಗ ಮನೆಮಂದಿ ಒಟ್ಟಿಗಿರುತ್ತಿದ್ದರು. ಆಧುನಿಕ ಗಾಳಿ ಬೀಸುತ್ತಿದ್ದಂತೆ, ಶಿಕ್ಷಣ, ಇನ್ನಿತರ ಉದ್ಯಮ ಎಂದು ಮನೆಮಂದಿ ದೂರದೂರವಾದರು. ಅದರ ಜೊತೆ ಆಚರಣೆಗಳೂ, ಸಂಸ್ಕೃತಿಯೂ ರೂಪಾಂತರವಾಯಿತು. ಗುತ್ತಿನಲ್ಲಿ ವರುಷಕ್ಕೊಮ್ಮೆ ಬೆಳೆದ ಬೆಳೆಯನ್ನು ಗೇಣಿ ಕೊಡಬೇಕಾಗಿತ್ತು. ಆ ಸಂದರ್ಭದಲ್ಲಿ ಪೊಲಿ ಎಂದು ಸಂಭ್ರಮಿಸುವ ಆಚರಣೆ ಇತ್ತು. ಜಮೀನುದಾರನ ಮನೆ ತುಂಬಿಸುವ ಈ ಕಾರ್ಯ ಮಾಯವಾಯಿತು. ಗದ್ದೆ ಉಳುವ, ನೇಜಿ ನೆಡುವ ಕೃಷಿಕಾರ್ಯಕ್ಕೆ ಕೊನೆ ಬಿದ್ದಂತೆ ಮಂಜೊಟ್ಟಿ, ಓಬೇಲೆಗಳು ಜನಮಾನಸದಿಂದ ಮಾಯವಾದವು. ಜಮೀನುದಾರಿ ಪದ್ಧತಿ ಒಂದು ಸಂಸ್ಕೃತಿಯನ್ನೇ ನಿರ್ಮಿಸಿತ್ತು. ಭೂಮಸೂದೆಯ ಪ್ರಹಾರ ಬಿದ್ದು ಅದು ವಿಘಟಿತವಾದಾಗ ಕೃಷಿ ಜೊತೆ ಸೇರಿಕೊಂಡಿದ್ದ ಹಲವು ಆಚರಣೆಗಳು ಮಾಯವಾಗುತ್ತಾ ಸಾಗಿದವು. ಗುತ್ತಿನ ಮನೆಯ ಸುತ್ತ ನಿರ್ಮಿತವಾದ ವ್ಯವಸ್ಥೆ ಅಂಬಕ್ಕೆ ಏಕಾಂಗಿಯಾದಾಗ, ಎಂಬತ್ತನಾಲ್ಕು ವರ್ಷದ ವೃದ್ಧೆಯ ಕಾಲಾನಂತರ ಅದೂ ಒಡೆದುಹೋಗುವ ಮುನ್ಸೂಚನೆಯನ್ನು ನೀಡುತ್ತದೆ.

ಸಮುದಾಯವು ಒಂದು ಸನ್ನಿವೇಶ ಎದುರಿಸಲು ಹಲವು ಸಾಧ್ಯತೆಗಳ ಕುರಿತು ಯೋಚಿಸುತ್ತದೆ; ತರ್ಕಿಸುತ್ತದೆ. ಸಂಕಪ್ಪ ಹೆಗ್ಡೆಯವರಿಗೆ ಹೊಳೆದ ಇನ್ನೊಂದು ಉಪಾಯವೆಂದರೆ ಪರಸ್ಪರ ಸಹಕಾರದಿಂದ ಕೃಷಿ ಮಾಡುವ ‘ಸಹಕಾರ ಪದ್ಧತಿ’. ಧಣಿಯ ಗತ್ತಿನ ಬದುಕಿನಿಂದ ಕೆಳಗೆ ಇಳಿದು ಆಳುಗಳ ಜೊತೆ ಕೈಸೇರಿಸಿ ಇಳಿಯಲು ಮನಸ್ಸನ್ನು ಪಕ್ವಗೊಳಿಸುತ್ತಾರೆ. ನಮ್ಮ ಪರವಾಗಿ ದುಡಿಯಲು ಮೂಲದಾಳುಗಳನ್ನು ಬಳಸಿಕೊಳ್ಳಬಹುದು ಎಂದುಕೊಳ್ಳುತ್ತಾರೆ. ಕೃಷಿ ಮೇಲಿನ ಮಮತೆ ಈ ಸ್ಥಾನಪಲ್ಲಟವನ್ನು ಮಾಡಲು ಸಿದ್ಧಗೊಳಿಸುತ್ತದೆ. ಮೇಲುಕೀಳು ಭಾವ ಕಿತ್ತೆಸೆದು ಸಮಾನತೆಯ ಭಾವ ಮುನ್ನೆಲೆಗೆ ಬರುತ್ತದೆ.

“ನಾವು ಉಳುವ, ನಾಟಿ ಮಾಡುವ ಕುಟುಂಬದಿಂದಲೇ ಬಂದವರು. ಒಕ್ಕಲುತನ ಮಾಡುವುದರಿಂದಲೇ ನಾವು ಒಕ್ಕಲಿಗರು. ಒಕ್ಕಲುತನಕ್ಕೆ ಅವರ ಗದ್ದೆ ಇವರ ಗದ್ದೆ ಎಂಬ ಭೇದ ಇಲ್ಲ. ನಾನು ಅವರ ಗದ್ದೆ ಉಳುಮೆ ಮಾಡುತ್ತೇನೆ. ನೀನು ನಾಟಿ ಮಾಡು ಅಂದದ್ದಲ್ಲ. ಪರಸ್ಪರ ಒಬ್ಬರಿಗೊಬ್ಬರು ಸಹಕರಿಸಿದರೆ ಈ ಭೂಮಿಯಲ್ಲಿ ಒಕ್ಕಲುತನ ಸದಾ ಇರುತ್ತದೆ.”[10] ಸಂಕಪ್ಪ ಅಂಬಕ್ಕೆಗೆ ಹೇಳುವ ಈ ಮಾತು ಪ್ರೀತಿಯ ಕೃಷಿ ಉಳಿಸಲು ಕೆಳಹಂತಕ್ಕೆ ಇಳಿಯಲು ಸಿದ್ಧವಾದ ಸಂದರ್ಭವಾಗಿದೆ.

‘ಕರ್ನಾಟಕದ ಭೂಸುಧಾರಣೆಗಳು ಬಂಡವಾಳದ ವಹಿವಾಟಿಗೆ ಬಹಳ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿಕೊಡುವುದರ ಜತೆಗೆ, ಕೆಳವರ್ಗದ ಜನರಿಗೆ ದೊರಕಿಸಿದ ಕೆಲವು ಲಾಭಗಳು ಸರ್ಕಾರಕ್ಕೆ ಬೆಂಬಲ ಹೆಚ್ಚಿಸುವ ಉದ್ದೇಶದಿಂದ ಬಹಳ ಮುಖ್ಯವಾಗಿದ್ದವು. ಈ ಸುಧಾರಣೆಗಳನ್ನು ಸರ್ಕಾರವು ರೈತರು ಯಾವುದೇ ರೀತಿಯಲ್ಲಿ ಸಂಘಟಿತ ಒತ್ತಾಯ ಮಾಡದೇ ಇದ್ದರೂ ಕೈಗೊಂಡಿತ್ತು. ಇದರಿಂದ ಕೃಷಿ ಸಮಾಜದಲ್ಲಿ ಬೆಳೆಯಬಹುದಾದ ವರ್ಗ ಸಂಬಂಧಗಳು ಸಡಿಲಗೊಂಡವು. ಕಾಯಿದೆಯಿಂದ ಸಮಾಜದ ಬಲಿಷ್ಠ ವರ್ಗಗಳ ಅಸ್ತಿತ್ವಕ್ಕೆ ಧಕ್ಕೆ ಬರದಿದ್ದರೂ, ಒಂದು ಸಣ್ಣ ಆಘಾತವಾದರೂ ಆಯಿತು.’[11] ಜಾತಿಶ್ರೇಣೀಕರಣ ಪದ್ಧತಿ ದುರ್ಬಲವಾಗಲು ಭೂಸುಧಾರಣೆ ಕಾನೂನು ಸ್ವಲ್ಪಮಟ್ಟಿಗೆ ಕಾರಣವಾಯಿತು.

‘ಭೂಸುಧಾರಣೆಗಳ ಕಾರಣದಿಂದ ಹಳ್ಳಿಗಾಡಿನ ಕಡೆಗಳಲ್ಲಿ ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳು ಕಾಲಿಡಲು ಸಾಧ್ಯವಾಯಿತು. ಪಟ್ಟಣಗಳು, ಕೈಗಾರಿಕೆಗಳು ಮತ್ತು ಸಾಲದ ವ್ಯವಹಾರಗಳು ರೈತರ ಜನಜೀವನಕ್ಕೆ ಸೇರ್ಪಡೆಯಾಗತೊಡಗಿದವು.[12] ರೈತರ ಬದುಕು ಆಧುನಿಕ ಸೌಲಭ್ಯಗಳಿಗೆ ತೆರೆಯುವುದು ಅನಿವಾರ್ಯವಾಯಿತು.

“ನಮ್ಮ ಸಂಸ್ಕೃತಿ, ನಮ್ಮ ಭಾಷೆ – ಅಷ್ಟು ಸುಲಭದಲ್ಲಿ ಯಾವತ್ತೂ ಸಾಯುವಂಥದಲ್ಲ ಎಂಬ ಧೈರ್ಯ ನನಗೆ ಇದೆ. ಒಂದು ವೇಳೆ ಸಾಯುವಾಗಲೂ ಅದು ಇನ್ನೊಂದು ಸಂಸ್ಕೃತಿಯನ್ನು ಹುಟ್ಟುಹಾಕಿ ಅದರೊಳಗೇ ಇರುತ್ತದೆ ಅಂತ ನನಗೆ ಅನಿಸುತ್ತದೆ’.[13] ಶಾಂತಿರಾಜ ಅಂಬಕ್ಕೆಯ ಮೊಮ್ಮಗಳಾದ ಪ್ರಜ್ಞಾಳ ಬಳಿ ಹೇಳುವ ಈ ಮಾತುಗಳು ಸಂಸ್ಕೃತಿಯ ಪಲ್ಲಟದ ಕುರಿತ ಮಹತ್ವದ ಮಾತುಗಳು.

**ಮಾತೃಪ್ರಧಾನ ವ್ಯವಸ್ಥೆಯ ಮೇಲಾದ ಪರಿಣಾಮಗಳು**

ಭೂಮಸೂದೆ ಕಾನೂನು ಜಾರಿಯಾಗುತ್ತಿದ್ದಂತೆ ಮಾತೃಪ್ರಧಾನ ವ್ಯವಸ್ಥೆಗೆ ತೀವ್ರ ಹೊಡೆತ ಬಿದ್ದದ್ದು ಸುಳ್ಳಲ್ಲ. ತಾಯಿಯ ಮೂಲಕ ಮಗಳಿಗೆ ಆಸ್ತಿಯ ಹಸ್ತಾಂತರವಾಗುವ ತುಳುನಾಡಿನ ವಿಶಿಷ್ಟ ವ್ಯವಸ್ಥೆಯೇ ಮಾತೃಪ್ರಧಾನ ವ್ಯವಸ್ಥೆ.

‘ಭೂಮಸೂದೆ ಕಾನೂನು ಜಾರಿಗೆ ಬರುವವರೆಗೆ ಬಂಟರ ಹೆಣ್ಣು ತನ್ನ ಸೋದರ ಸಮುದಾಯದಿಂದ ಸಂಪೂರ್ಣ ರಕ್ಷಿತಳಾಗಿದ್ದಳು. ಅವಳನ್ನು ಆಸ್ತಿಯೊಡತಿ ಮಾಡುವ ಮೂಲಕ ಅಧಿಕಾರ ಸೂತ್ರ ಹಿಡಿದ ಯಜಮಾನ ವರ್ಗ ಹಾಗೂ ಕುಟುಂಬದ ಇತರ ಪುರುಷವರ್ಗ ರಾಣಿಯಂತೆ ನಡೆಸಿತ್ತು. ಅವಳಿಗೆ ಮದುವೆ ಮಾಡಿ

ಕೊಡುವಾಗಲೂ ಕನ್ಯಾದಾನ ಮಾಡುತ್ತಿರಲಿಲ್ಲ. ಪತ್ನಿತ್ವದ ಹಕ್ಕನ್ನು ಮಾತ್ರ ಅವಳ ಪತಿಗೆ ನೀಡಿ, ಅವಳ ಮಕ್ಕಳಿಗೆ ತಾನೇ ಭವಿಷ್ಯ ನಿರ್ಮಾಪಕನಾಗಿ, ಕುಟುಂಬದ ಮೇಲ್ಮೆಗಾಗಿ ಬದ್ಧತೆಯನ್ನು ಪ್ರದರ್ಶಿಸುತ್ತಿದ್ದ. ಮನೆಯ ಯಜಮಾನ ಕುಟುಂಬದ ಫಲವಂತಿಕೆ ಮತ್ತು ಸಮೃದ್ಧಿಯ ಪ್ರಮುಖ ಮೂಲಗಳನ್ನು ರಕ್ಷಿಸುವ ಹೊಣೆಗಾರಿಕೆಯನ್ನು ನಿಭಾಯಿಸಬೇಕಾಗಿತ್ತು. ಅವನು ಕುಟುಂಬ ಪಾಲಕ ದೈವಗಳ ಪ್ರತಿನಿಧಿಯಾಗಿ ಇರುತ್ತಿದ್ದ. ಕುಟುಂಬವನ್ನು ನಿರಂತರವಾಗಿ ರಕ್ಷಿಸಿ ಕುಟುಂಬ ಗೌರವವನ್ನು ಉನ್ನತಿಗೇರಿಸುವುದಾಗಿ ಅಭಯ ನೀಡುವ ಕುಟುಂಬದ ದೈವಗಳು ಅವನಿಗೆ ನೆರವಾಗುತ್ತಿದ್ದವು.[14]'ಉಲ್ಲಂಘನೆ' ಕಾದಂಬರಿಯಲ್ಲಿ ಗುತ್ತಿನ ಯಜಮಾನಿಯಾಗಿ ಆ ಜವಾಬ್ದಾರಿಯನ್ನು ಹಕ್ಕೆಂಬಂತೆ ಪೂರ್ಣಮನಸ್ಸಿನಿಂದ ಸ್ವೀಕರಿಸಿ ನಿಭಾಯಿಸುತ್ತಿದ್ದ ಅಂಬಕ್ಕೆ ಸ್ಥಿತ್ಯಂತರಗೊಳ್ಳುತ್ತಿರುವ ಪರಿಸ್ಥಿತಿಯನ್ನು ಗಮನಿಸುತ್ತಾ ಕ್ರೋಧ, ಹತಾಶೆ, ವೇದನೆ ಮೊದಲಾದ ದ್ವಂದ್ವ ಮನಸ್ಥಿತಿಗಳಿಂದ ಎದುರುಗೊಳ್ಳುತ್ತಾಳೆ. ಎಂಟನೆಯ ಈಯತ್ತೆವರೆಗೆ ವಿದ್ಯಾಭ್ಯಾಸ ಪಡೆದ ಆಕೆಯ ಮುಂದೆ ಇದ್ದ ಜ್ಞಾನವೆಂದರೆ ಆಕೆ ನೋಡಿದ ಬಾಲ್ಯ, ಹಿರಿಯರ ಆದರ್ಶ, ರೀತಿ, ಆಚರಣೆಗಳು ಮತ್ತು ಕೈಗೊಂಡ ತೀರ್ಮಾನಗಳು. ತನ್ನ ಹಿರಿಯರು ನಡೆದ ಬದುಕಿನ ರೀತಿಯನ್ನು ಚ್ಯುತಿ ಬಾರದಂತೆ ಜವಾಬ್ದಾರಿಯಿಂದ ಮುಂದುವರೆಸಿಕೊಂಡು ಹೋಗುವ ತವಕ ಆಕೆಗೆ. ಜೊತೆಗೆ ಅದೇ ಸರಿಯೆನ್ನುವ ಧೋರಣೆ. ಆದರೆ ಭೂಮಸೂದೆ ಕಾನೂನಿನ ಹೊಡೆತದಿಂದ ಆಕೆಯ ಚಿಂತನೆಗಳಿಗೆ, ನಂಬಿದ ತತ್ವಗಳಿಗೆ ಬಲವಾದ ಹೊಡೆತ ಬೀಳುತ್ತದೆ. ಸಂಕಪ್ಪನ ಗಾಂಧಿವಾದದಿಂದ ಗೇಣಿದಾರರು ಸುಲಭವಾಗಿ ಪ್ರತಿರೋಧವಿಲ್ಲದೆ ಸ್ವತಂತ್ರರಾಗುತ್ತಾರೆ. ಅಂಬಕ್ಕೆ ಆಕ್ರೋಶದಿಂದ ಅಣ್ಣನಿಗೆ ಚುಚ್ಚು ಮಾತುಗಳನ್ನಾಡಲೂ ಹಿಂಜರಿಯುವುದಿಲ್ಲ. ಗುತ್ತಿನ ವೈಭವಕ್ಕೆ ಮಸಿ ಬಳಿಯುತ್ತಾರೆ ಎಂಬ ದುಃಖ ಆಕೆಯದು. ಜೊತೆಗೆ ದೈವ ಕೋಪಕ್ಕೆ ತುತ್ತಾಗುವೆವೆಂಬ ಭೀತಿ ಆಕೆಗೆ. ಸಂಕಪ್ಪಣ್ಣನನ್ನು ನೇರವಾಗಿ ದೂರಲು ಅಸಾಧ್ಯವಾದಾಗಲೆಲ್ಲಾ ಆಕೆ ದೂರುತ್ತಿದ್ದುದು ಗಾಂಧಿಯನ್ನು. ಆಕೆಯ ಹಿಂದಿನಿಂದಲೂ ನಡೆದು ಬಂದ ಮಾತೃಪ್ರಧಾನ ವ್ಯವಸ್ಥೆಗೆ ಶಿಕ್ಷಣ ಪಡೆದ ಆಕೆಯ ಮಗಳು ಶಾರದೆ ಒಪ್ಪಿಕೊಳ್ಳುವುದಿಲ್ಲ. ಆಕೆ ಪತಿಯ ಮನೆಯಲ್ಲೇ ಇರಲು ಇಚ್ಛಿಸುವವಳು. ತನ್ನ ಇಳಿಗಾಲದಲ್ಲಿ ವ್ಯಾಪಕವಾಗಿ ಬದಲಾವಣೆಗಳಿಗೆ ತೆರೆದುಕೊಂಡ ಅಂಬಕ್ಕೆ ಜಮೀನನ್ನು ಮಾತೃಪ್ರಧಾನ ಪದ್ಧತಿಯಂತೆ ಪ್ರಜ್ಞಾಳಿಗೆ ಮಾತ್ರ ಕೊಡದೆ, ಮೊಮ್ಮಗನಿಗೂ ನೀಡುವ ತೀರ್ಮಾನಕ್ಕೆ ಬರುವುದು ಆಕೆಯ ಚಿಂತನೆಯಲ್ಲಾದ ಪಲ್ಲಟವನ್ನು ಸೂಚಿಸುತ್ತದೆ. ಎಲ್ಲವನ್ನು ಜುಮಾದಿಗೆ ಒಪ್ಪಿಸಿ ನಿರಾಳವಾಗಿರುವ ಸ್ಥಿತಪ್ರಜ್ಞೆಯನ್ನು ರೂಢಿಸಿಕೊಳ್ಳುವುದು ಗಮನಸೆಳೆಯುತ್ತದೆ. ಸಹೋದರ ಸಂಕಪ್ಪಣ್ಣನ ನಿಧನದ ನಂತರ ಆಕೆ ಜುಮಾದಿಗೆ ಹೂನೀರು ಇಡಲು ತನ್ನ ಕುಟುಂಬದ ಬೇರೆ ವ್ಯಕ್ತಿಯನ್ನು ಆಶ್ರಯಿಸಬೇಕಾಗುತ್ತದೆ. ಮಾತೃಪ್ರಧಾನ ವ್ಯವಸ್ಥೆ ಆಕೆಯ ನಂತರ ಮುಂದುವರಿಯದ ಸ್ಪಷ್ಟ ನಿಲುವನ್ನು ಕಾದಂಬರಿ ವ್ಯಕ್ತಪಡಿಸುತ್ತದೆ.

**ಗೇಣಿದಾರರಲ್ಲಾದ ಬದಲಾವಣೆಗಳು**

ಭೂಸುಧಾರಣಾ ಕಾನೂನು ಹಲವು ಸ್ಥಿತ್ಯಂತರಗಳಿಗೆ ಕಾರಣವಾಗುತ್ತದೆ. ಒಕ್ಕಲುಗಳಲ್ಲಿ ಮೂಡಿದ ಎಚ್ಚರ, ತಮ್ಮ ಗುಲಾಮತನದ ಜೀವನದ ಅರಿವು, ಸ್ವತಂತ್ರರಾಗಿ ಬದುಕಲು ಹವಣಿಸುವ ಪ್ರಯತ್ನಕ್ಕೆ ನಾಂದಿಯಾಗುತ್ತದೆ. ಸಮಯ ಸಂದರ್ಭಗಳ ನೆಪ ಒಡ್ಡದೆ ದಿನದ ಇಪ್ಪತ್ತನಾಲ್ಕು ಗಂಟೆಯೂ ಬೆವರು ಸುರಿಸಿ ದುಡಿದ ಆಳುಗಳು ಭೂಸುಧಾರಣಾ ಕಾನೂನು ಜಾರಿಯಾಗಿ ಸ್ವತಂತ್ರರಾದ ಮೇಲೆ ಕೆಲಸವನ್ನು ಅರ್ಧದಲ್ಲಿ ನಿಲ್ಲಿಸಿ ಹೊರಡಲು ಸನ್ನದ್ಧರಾಗುತ್ತಾರೆ. ಕೂಲಿ ಕೇಳಲು ದಾಕ್ಷಿಣ್ಯ ಕಟ್ಟಿ ಹಾಕುತ್ತದೆ. ಕಾನೂನಿನ ಮೂಲಕ ಭೌತಿಕ ದಾಸ್ಯದಿಂದ ಹೊರಬಂದರೂ ಮಾನಸಿಕ ದಾಸ್ಯದಿಂದ ಹೊರಬರುವುದು ಸುಲಭವಲ್ಲ. ಸಂಕಪ್ಪ ಹೆಗ್ಡೆ ಹೆಚ್ಚುವರಿ ಸಂಬಳ ನೀಡಲು ಒಪ್ಪಿದ ತರುವಾಯ ಎಲ್ಲರೂ ಮನಃಪೂರ್ವಕವಾಗಿ ಕೆಲಸ ಮುಗಿಸುತ್ತಾರೆ.

ಭೂಮಸೂದೆಯ ಫಲವಾಗಿ ಕೆಲಸಗಾರರ ದುಡಿಯುವ ಅವಧಿ ಹಾಗೂ ಅವರ ಆಹಾರದಲ್ಲಿ ಪ್ರಮುಖ ಬದಲಾವಣೆಗಳು ಕಂಡುಬರುತ್ತವೆ. ಭೂಮಸೂದೆ ಜಾರಿಯಾಗುವ ಮುನ್ನ ಸೂರ್ಯೋದಯದ ಸಮಯದಲ್ಲಿ ಆಗಮಿಸುವ ಕೂಲಿಯಾಳುಗಳು ನಂತರದ ದಿನಗಳಲ್ಲಿ ಗಂಟೆ ಒಂಬತ್ತಾದರೂ ಅಂಗಳದ ಮೆಟ್ಟಿಲು ಹತ್ತುವುದಿಲ್ಲ. ಸಂಜೆ ಬೇಗನೇ ಮನೆಗೆ ತೆರಳಲು ಉತ್ಸಾಹ ತೋರುತ್ತಾರೆ. ನಮ್ಮ ದುಡಿಮೆ ಇಷ್ಟೇ ಸಮಯಕ್ಕೆ ಮೀಸಲು ಎಂಬ ಪ್ರಜ್ಞೆ ಬಂದಿರುತ್ತದೆ. ಭೂಮಸೂದೆ ಜಾರಿಯಾಗಿ ಗೇಣಿದಾರರು ಸ್ವತಂತ್ರರಾದ ಮೇಲೆ ಗುತ್ತಿನವರು ಅಧಿಕಾರಯುತವಾಗಿ ವರ್ತಿಸುವುದಿಲ್ಲ. ಬದಲಿಗೆ ಅನೇಕ ಸೌಲಭ್ಯಗಳನ್ನು ಕೆಲಸಗಾರರಿಗೆ ನೀಡಲು ಮುಂದಾಗುತ್ತಾರೆ. ಮೊದಲು ಕೆಲಸಗಾರರಿಗೆ ಗಂಜಿ ಚಟ್ನಿ ನೀಡುವ ಪರಿಪಾಠವಿತ್ತು. ಸ್ವತಂತ್ರರಾದ ತರುವಾಯ ವಿವಿಧ ಬಗೆಯ ವ್ಯಂಜನಗಳು ಹಾಗೂ ಮೀನು ಸಾರು ಊಟಕ್ಕೆ ಸಿದ್ಧವಾಗಿರುತ್ತದೆ. ಗಾಂಧಿವಾದಿ ಸಂಕಪ್ಪಣ್ಣ ಕೆಲಸಗಾರರನ್ನು ಗುತ್ತಿನ ಮನೆಯ ಒಳಗೆ ಆಹ್ವಾನಿಸಿ ಅಂಬಕ್ಕೆಯ ವಿರೋಧದ ನಡುವೆಯೂ ಊಟದ ವ್ಯವಸ್ಥೆ ಮಾಡುತ್ತಾರೆ. ಧನಿ ಒಕ್ಕಲು ಎಂಬ ವ್ಯವಸ್ಥೆ ನಾಶವಾಗುವುದರ ಜೊತೆಗೆ ಹಲವು ಸುಧಾರಣೆಗಳು ಬಂದವು.

ಭೂನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿ ಗೇಣಿದಾರರು ಸ್ವತಂತ್ರರಾದದ್ದು ಮಹತ್ವದ ನಿರ್ಧಾರ. ಮರಗಳನ್ನು ಮಾರಾಟ ಮಾಡುತ್ತಾ ಗದ್ದೆಗಳು ಕಲ್ಲುಕೋರೆಗಳಾಗಿ, ಕೃಷಿ ಭೂಮಿ ಮಾರಾಟ ಮಾಡಲು ಪ್ರಯತ್ನಿಸುವುದು ಪ್ರಮುಖ ಪಲ್ಲಟ. ಕೃಷಿಕಾರ್ಮಿಕರ ಕೊರತೆ ಒಂದೆಡೆಯಾದರೆ, ಕುಟುಂಬಗಳು ವಿಭಕ್ತಗೊಂಡು ಸಾಲ ಮಾಡುವ ಪರಿಸ್ಥಿತಿ ಎದುರಾದದ್ದು ಇನ್ನೊಂದು ಕಾರಣ. ಕೃಷಿಯನ್ನು ತೊರೆದು ಅನ್ಯ ಉದ್ಯಮಗಳ ಕಡೆ ಆಸಕ್ತಿ ಬೆಳೆಯಿತು. ಗೇಣಿದಾರರಲ್ಲಿ ಆತ್ಮವಿಶ್ವಾಸ, ಧೈರ್ಯ ಸ್ವತಂತ್ರ ನಿರ್ಧಾರ ಮೊದಲಾದ ಗುಣಗಳು ಬೆಳೆದು ಬಂದವು. ಕೆಳವರ್ಗದ ಮಂಗ್ರು ಗುಲಾಮನಾಗಿದ್ದವನು ಭೂಮಸೂದೆ ಹಾಗೂ ಪ್ರಜಾಪ್ರಭುತ್ವದ ಆಡಳಿತ ವಿಕೇಂದ್ರೀಕರಣದಿಂದ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವುದು ಮಹತ್ವದ ಬದಲಾವಣೆ. ಗುತ್ತು ಮನೆಯ ಉತ್ತರಾಧಿಕಾರಿ ಸುಂದರ ಚುನಾವಣೆಯಲ್ಲಿ ಸೋಲುವುದು ಸಮಾನತೆಯ ತತ್ವವನ್ನು ಅಥವಾ ಪ್ರಜಾಪ್ರಭುತ್ವದ ಎದುರು ಸರ್ವರೂ ಸಮಾನರು ಎಂಬ ತಿಳುವಳಿಕೆ ಮೂಡಿಸುತ್ತದೆ. ಗೇಣಿದಾರರಲ್ಲಿ ಎಚ್ಚರದ ಪ್ರಜ್ಞೆ ಜೊತೆಗೆ ಚಿಂತಿಸುವ ಸಾಮರ್ಥ್ಯ, ಸ್ವತಂತ್ರ ನಿರ್ಧಾರ ಕೈಗೊಳ್ಳುವ ಜಾಣ್ಮೆ ಮೊದಲಾದವು ಜಾಗ್ರತಗೊಳ್ಳುತ್ತವೆ.

**ಗ್ರಂಥ ಋಣ**


1. ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ, ಜಿ. ಎಲ್. ಬಡಿಗೇರ, ಸಂಗಮೇಶ್ವರ ಪ್ರಕಾಶನ, ಸಂಕೇಶ್ವರ, 1998, ಪುಟ 552.
2. ಕರ್ನಾಟಕ ಸಂಗಾತಿ, ಪ್ರ.ಸಂ. ಬರಗೂರು ರಾಮಚಂದ್ರಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, 2002, ಪುಟ 684.
3. ವಸುಂಧರೆಯ ಗ್ಯಾನ, ಎಚ್. ನಾಗವೇಣಿ, ಲೋಹಿಯಾ

ಪ್ರಕಾಶನ,2006, ಪುಟ71
4. ಕರ್ನಾಟಕ ಸಂಗಾತಿ, ಪ್ರ.ಸಂ. ಬರಗೂರು ರಾಮಚಂದ್ರಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, 2002, ಪುಟ 683
5. ಉಲ್ಲಂಘನೆ, ಡಾ.ನಾ.ಮೊಗಸಾಲೆ, ಸುಮುಖ ಪ್ರಕಾಶನ, ಮರುಮುದ್ರಣ, 2010, ಪುಟ 27
6. ಅದೇ ಪುಟ : 32
7. ಅದೇ ಪುಟ 444
8. ಅದೇ ಪುಟ 445
9. ಅದೇ ಪುಟ: 449,
10. ಅದೇ ಪುಟ 36
11. ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಪ್ರ.ಸಂ. ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2010, ಪುಟ 517
12. ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಪ್ರ.ಸಂ. ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2010, ಪುಟ 517
13. ಉಲ್ಲಂಘನೆ, ಡಾ.ನಾ.ಮೊಗಸಾಲೆ, ಸುಮುಖ ಪ್ರಕಾಶನ, ಮರುಮುದ್ರಣ, 2010, ಪುಟ 567
14. ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಇಂದಿರಾ ಹೆಗ್ಗಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2004 ಪುಟ 165.
15. ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ, ಜಿ. ಎಲ್. ಬಡಿಗೇರ, ಸಂಗಮೇಶ್ವರ ಪ್ರಕಾಶನ, ಸಂಕೇಶ್ವರ, 1998
16. ಕರ್ನಾಟಕ ಸಂಗಾತಿ, ಪ್ರ.ಸಂ. ಬರಗೂರು ರಾಮಚಂದ್ರಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, 2002.
17. ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಪ್ರ.ಸಂ. ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2010.
18. ವಸುಂಧರೆಯ ಗ್ಯಾನ, ಎಚ್. ನಾಗವೇಣಿ, ಲೋಹಿಯಾ ಪ್ರಕಾಶನ,2006.
19. ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಇಂದಿರಾ ಹೆಗ್ಗಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2004.